◆ ಮದುವೆ ಆದ ಮೇಲೆ ಓದಬೇಕು ಅಂತ ನಿಮಗೆ ಅನ್ನಿಸಲಿಲ್ವಾ?

ಕೇಳಿದೆ. ಬ್ಯಾಡ ಅಂದ್ರು ನೋಡ್ರಿ. ಆದರೂ ಇವರಿಗೆ ತಿಳಿದಾಂಗ ನಾನು ಹಿಂದಿ ವಿಶಾರದ ಪರೀಕ್ಷೆ ಪಾಸು ಮಾಡಿಕೊಂಡಿದ್ದೆ (ನಗು). ಅಕ್ಕಂದಿರಿಗೆ, ನಮ್ಮ ಮನೆಯವರಿಗೆ ಇಕೀನ್ನ ಮುಂದ ಓದಿಸೋದು ಬ್ಯಾಡ ಅಂತ ಹೇಳಿದ್ರು. ಇವರಿಗೆ ಬಹಳ ಆತಂಕ ಇತ್ತು, ನಾನು ಹೊರಗ ಹೋಗೋದರ ಬಗೆಗೆ.

◆ ಭಾರ್ಯಾ ರೂಪವತೀ ಶತ್ರು...

(ನಗು...)

◆ ಸಂಸಾರದ ಆರಂಭದ ದಿನಗಳು? ಸಾಗರದ ಲಾಲ್ ಬಹದ್ದೂರ್ ಶಾಸ್ತ್ರಿ ಕಾಲೇಜಿನಲ್ಲಿ ಮೇಷ್ಟ್ರು ಕೆಲಸಕ್ಕೆ ಸೇರಿಕೊಂಡದ್ದು, ಉತ್ತರ ಕರ್ನಾಟಕದಿಂದ ಮಲೆನಾಡಿನ ಆ ಅನುಭವಗಳು ಹೇಗಿದ್ದವು?

ಮೊದಮೊದಲು ಮನೇಲಿ ಒಬ್ಬಳೇ ಅಂತ ಆಗಿ ಬೇಸರವಾಗ್ತಿತ್ತು. ಇವರು ತಡ ಮಾಡಿ ಬಂದಾಗ ಕೆಲವೊಮ್ಮೆ ಅಳ್ತಿದ್ದೆ. ಆಮೇಲೆ ಅಡಿಗರ ಹೆಂಡತಿ ಲಲಿತಾ ಅವರ ಪರಿಚಯವಾಯ್ತು. ಅಲ್ಲಿರುವವರೆಲ್ಲ ಬಹಳ ಚೆನ್ನಾಗಿ ನನ್ನನ್ನ ನೋಡಿಕೊಂಡರು. ಅಲ್ಲಿರುವಷ್ಟು ಕಾಲ ಬಹಳ ಸಂತೋಷವಾಗಿಯೇ ಇದ್ದೆವು.

◆ ದಾಂಪತ್ಯದಲ್ಲಿ ನಿರಾಸೆ, ಸವಾಲುಗಳು ಇದ್ದೇ ಇರುತ್ತವೆ. ಆರಂಭದಲ್ಲಂತೂ ಹೊಂದಾಣಿಕೆ ಸಾಧ್ಯವಾಗುವ ತನಕ ಇವು ಇನ್ನೂ ಸಹಜ. ಅಂಥ ಪ್ರಸಂಗಗಳು?

ನಿಜ ಹೇಳ್ಲಾ ಆಶಾದೇವಿ... ಜಗತ್ತು ತಿಳಿದುಕೊಂಡದ್ದಕ್ಕಿಂತ ಹೆಚ್ಚು ಸುಖ ನಮ್ಮದು, ಹಾಗೇನೇ ಲೋಕಕ್ಕೆ ಅರ್ಥವೇ ಆಗದಂಥ ದುಃಖವೂ ನಮ್ಮ ಪಾಲಿಗೆ ಬಂದಿತ್ತು. ಆದರೆ, ಯಾವ ಹೊತ್ತಿಗೂ ನಾವು ಒಬ್ಬರನ್ನೊಬ್ಬರು ಬಿಟ್ಟುಕೊಡಲಿಲ್ಲ. ಹಂಗಾಗೇ ನಾವು ಇಲ್ಲಿ ತನಕ ಚೆಂದಾಗಿ ಬಾಳಿಕೊಂಡು ಬಂದಿದೇವಿ.

◆ ಮನಸ್ತಾಪಗಳನ್ನ ಹೇಗೆ ಬಗೆಹರಿಸಿಕೊಳ್ತೀರಿ?

ನೋಡ್ರೀ, ಜಗಳ ಇದ್ದೇ ಇರ್ತಾವು. ಆದ್ರ, ನಾನು ಯಾವ ಕಾರಣಕ್ಕರ ಜಗಳಾಡ್ಲಿ, ಅದನ್ನ ಮುಂದುವರೆಸೋದಿಲ್ಲ. ನನ್ನ ಸೊಸೆ, ಮಕ್ಕಳಿಗೂ ನಾನು ಹೇಳೋದು ಅದು... ಮುಚ್ಚಿಟ್ಟುಕೋಬ್ಯಾಡ್ರಿ, ಆದರ ಅದನ್ನ ಸಾಧಿಸೋಕ್ಕು ಹೋಗಬ್ಯಾಡ್ರಿ, ಅದನ್ನ ಅಲ್ಲಲ್ಲೆ ತೂರೀತಾ ಮುಂದು ಸಾಗಬೇಕು, ಅಂದ್ರ ಸಂಸಾರ ಉಳೀತದ, ಬೆಳೀತದ.

◆ ಮೇಷ್ಟ್ರು ಅವರ ಬರವಣಿಗೇಲಿ ಮುಳುಗಿರ್ತಾ ಸಂಸಾರದ ಜವಾಬ್ದಾರಿ ಎಲ್ಲ ನಿಮ್ಮ ಮೇಲೆ ಇತ್ತು ಅಲ್ವಾ?

ಹಾಂಗೇನಿಲ್ರಿ. ಎಲ್ಲ ಜವಾಬ್ದಾರಿ ಅವರ ಹೊರತಿದ್ರು. ಪಾತ್ರೆಪಗಡಿಯಿಂದ ಹಿಡಿದು ಎಲ್ಲಾ ಅವರ ತರತಿದ್ರು. ಮಕ್ಕಳ ಶಾಲೆ ಫೀಸಿಂದ ಹಿಡಿದು ಎಲ್ಲಾ ಅವರ ಕಟ್ಟತಿದ್ರು.

◆ ಬೆಂಗಳೂರು ಯುನಿವರ್ಸಿಟೀಲಿ ಕೆಲಸ ಸಿಗುವ ತನಕ ತಿರುಗಾಟದ ಬದುಕು. ಹಣಕಾಸಿನ ಸಮಸ್ಯೆ ಇದ್ದಿರಬೇಕು...

ಇತ್ತವಾ. ಆದರ ಒಂದು ಹೇಳ್ತೀನಿ. ಎಂದೂ ಇವರು ನನಗ ಯಾವುದಕ್ಕೂ ಕಡಿಮೆ ಮಾಡಿರಲಿಲ್ಲ. ಎಂಥಾ ಚಲೋ ಚಲೋ ಸೀರಿ ತರತಿದ್ರು. ಸಾಕು ಬಿಡ್ರಿ ಅಂತ ನಾನ ಹೇಳ್ತಿದ್ದೆ.

◆ ಮಕ್ಕಳ ಓದಿನ ಬಗ್ಗೆ...

ಪಾಠ ನಾನ ಹೇಳಿಕೊಡ್ತಿದ್ದೆ. ಆದರ ಸಂಜಿ ಮುಂದ ಮಕ್ಕಳನ್ನು ಕೂಡಿಸಿಕೊಂಡು ಆಟಾ ಆಡ್ತಿದ್ರು, ಕತಿ ಹೇಳ್ತಿದ್ರು. ರಿಂಗ್, ಕೇರಂ , ಚೆಸ್ ಆಡ್ತಿದ್ವಿ. ಸಂತೋಷವಾಗಿ ಕಾಲ ಕಳಿತಿದ್ವಿ.

◆ ನೀವು ಬಹಳ ಓದ್ತೀರಿ. ಕನ್ನಡದ ಎಲ್ಲ ಮುಖ್ಯ ಲೇಖಕ ಲೇಖಕಿಯರನ್ನೂ ಓದ್ತೀರಿ. ಓದುವ ಅಭ್ಯಾಸ ಮುಂಚಿಂದನೂ ಇತ್ತಾ?

ಶಾಲೆಗೆ ಹೋಗುವಾಗಿಂದಲೂ ಓದ್ತಿದ್ದೆ. ಅದೇ ಮುಂದುವರಕೊಂಡು ಬಂದದ. ಬೇಂದ್ರೆಯಿಂದ ಹಿಡಿದು ಎಲ್ಲರನ್ನೂ ಓದ್ತಾ ಇರ್ತೀನಿ.

◆ ನಿಮಗೆ ಇಷ್ಟವಾದ ಲೇಖಕರು? ಲೇಖಕಿಯರು?

ಅನಂತಮೂರ್ತಿ, ತೇಜಸ್ವಿ, ಕುವೆಂಪು , ಬೇಂದ್ರೆ, ಅನುಪಮಾ ನಿರಂಜನ, ವೀಣಾ ಶಾಂತೇಶ್ವರ. ವೀಣಾ ಅವರ 'ಮುಳ್ಳುಗಳು' ಅಂತೂ ನನಗೆ ಬಹಳ ಇಷ್ಟವಾದ ಬರವಣಿಗೆ.

◆ ಕಂಬಾರರ ಬರವಣಿಗೆಯ ಮೊದಲ ಓದುಗರು ನೀವು. ನಿಷ್ಠುರ ವಿಮರ್ಶೆ ಮಾಡೋಕಾಗುತ್ತಾ? ಸಂಕೋಚ, ಅಭಿಮಾನ ಅಡ್ಡ ಬರುತ್ತಾ?

ಏ ಇಲ್ರಿ... ನಾ ಹೇಳ್ತೀನಿ. ನಾನು ವಿಮರ್ಶಕಿನೂ ಹೌದು ಅಂತ. ಏನನ್ನಸ್ತದ ಅದನ್ನ ಸಂಕೋಚ ಇಲ್ಲದೆ ಹೇಳ್ತೀನಿ.

◆ ಒಂದು ಕೃತೀನ ಮೆಚ್ಚಿಕೊಳ್ಳೋದಿಕ್ಕೆ ಅದರಲ್ಲಿ ಮುಖ್ಯವಾಗಿ ಏನಿರಬೇಕು ಅನ್ನಿಸುತ್ತೆ ನಿಮಗೆ?

ನಾ ಇವರಿಗೂ ಹೇಳ್ತಿರತೀನಿ, ಒಂದು ಪುಸ್ತಕ ಹಿಂಡಿದರೆ ಒಂದಿಷ್ಟರ ರಸ ಬರಬೇಕು ಅಂತ. ಹಂಗಿದ್ರ ಅದು ಒಳ್ಳೆ ಪುಸ್ತಕ.

◆ ಕಂಬಾರರ ಕೃತಿಗಳಲ್ಲಿ ನಿಮಗೆ ತುಂಬಾ ಇಷ್ಟವಾದ ಪುಸ್ತಕ ಯಾವುದು?

ಒಂದೊಂದು ಒಂದೊಂದು ಕಾರಣಕ್ಕ ನನಗ ಸೇರ್ತದ. ಆದ್ರ, 'ಶಿವನ ಡಂಗುರ' ನನಗ ಬಹಳ ಸೇರಿತು.

◆ ಮೇಷ್ಟ್ರ ಜೊತೆ ಸೆಮಿನಾರ್‌ಗಳಿಗೆಲ್ಲಾ ಹೋಗ್ತೀರಾ?

ಮೊದಲು ಎಲ್ಲೂ ಹೋಗ್ತಿರಲಿಲ್ಲ. ಈಗ ಎಲ್ಲ ಕಡೆ ಹೋಗ್ತೀನಿ. ಬಹಳ ಖುಷಿ ಆಗ್ತದ. ಎಷ್ಟೊಂದು ಹೊಸ ವಿಚಾರಗಳು ತಿಳೀತವ. ಶಾಂತಾದೇವಿ ಕಣವಿ, ರುದ್ರಾಣಮ್ಮ, ಪದ್ಮಾ, ಲಲಿತಾ ಅಡಿಗ, ಇಂದಿರಾ ಲಂಕೇಶ್ ಇವರೆಲ್ಲಾ ನನಗೆ ಒಳ್ಳೆ ಗೆಳತಿಯರಾದ್ರು.

◆ ಇವರ ನಾಟಕಗಳ ಪ್ರಯೋಗಗಳನ್ನೆಲ್ಲಾ ನೋಡಿದ್ದೀರಾ?

## "ನಮ್ಮತ್ತೆ ಸೊಸೆಯ ಪರ...

ಈ ಸಂದರ್ಶನ ಮಾಡುವಾಗ ಸತ್ಯಭಾಮಾ ಮತ್ತು ಕಂಬಾರರ ಮಗಳು ಜಯಶ್ರೀ ಕಂಬಾರ ಮತ್ತು ಸೊಸೆ ರೇಖಾ ಕೂಡ ಇದ್ದರು. ಇದಕ್ಕೆ ಪ್ರತಿಕ್ರಿಯಿಸುತ್ತಾ ಅವರ ಸೊಸೆ ರೇಖಾ ಒಂದು ಮುಖ್ಯವಾದ ಅಂಶ ಹೇಳಿದರು. 'ಸಾಮಾನ್ಯವಾಗಿ ಅತ್ತೆಯರು ಹೆಣ್ಣುಮಕ್ಕಳ ಪರವಾಗಿ ಇರ್ತಾರೆ, ಆದರೆ ನಮ್ಮತ್ತೆ ಸೊಸೆಯ ಪರ. ಇದೊಂದು ಬಹಳ ದೊಡ್ಡ ಪ್ರಿವಿಲೇಜ್ ಅನ್ನಿಸುತ್ತೆ ನನಗೆ. ಇವರು ಒಂದು ಶಕ್ತಿ, ಈ ಕುಟುಂಬದ ಆಧಾರಸ್ತಂಭ ಅನ್ನೋದು ಉತ್ಪ್ರೇಕ್ಷೆಯಲ್ಲ, ಬಾಯಿಮಾತಲ್ಲ, ಅದು ನಮ್ಮ ಮನೇಲಿ ಮತ್ತೆ ಮತ್ತೆ ನಾವು ಕಂಡುಕೊಳ್ಳುವ ಸತ್ಯ'. ಸತ್ಯಭಾಮ ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ ಇದು ಅನ್ನಿಸಿತು ನನಗೆ.



**ನನಗ ಆರಾಮಿಲ್ಲ ಅಂದ್ರ ಒದ್ದಾಡಿ ಹೋಗ್ತಾರ. ಈ ಕಕ್ಕುಲಾತಿ, ನಿರ್ಮಲ ಪ್ರೇಮ ಇವ ನನ್ನ ಸಂಪತ್ತು ಅಂತ ನಾನು ತಿಳದೇನಿ.**